**ಕರ್ನಾಟಕ ಸರ್ಕಾರ**

**ಶಾಲಾ ಶಿಕ್ಷಣ ಇಲಾಖೆಯ, ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-560001.**

**ಸಂಖ್ಯೆ :ಸಿ5(2) ಅ.ಆ.ನೇ:ಸುತ್ತೋಲೆ/01/2023-24** **ದಿನಾಂಕ:16-10-2024**

**ಅಧಿಸೂಚನೆ**

ವಿಷಯ: ಅನುಕಂಪದ ಆಧಾರದ ಮೇಲೆ ನೌಕರಿ ಪ್ರಸ್ತಾವನೆಗಳನ್ನು ಆನ್‌ಲೈನ್ ತಂತ್ರಾಂಶದಲ್ಲಿ ನಿರ್ವಹಿಸುವ ಬಗ್ಗೆ.

ಉಲ್ಲೇಖ: 01.ಅನುಕಂಪದ ನೇಮಕಾತಿ ನಿಯಮಗಳು -1996 ರ ತಿದ್ದುಪಡಿ ಆದೇಶ ಸಂಖ್ಯೆ: ಡಿಪಿಎಆರ್.100 ಎಸ್ ಸಿ ಎ 95 ದಿನಾಂಕ:12-09-1996. ಮತ್ತು ಇತರೆ ತಿದ್ದುಪಡಿಗಳು.

02.ಈ ಕಛೇರಿಯ ಸುತ್ತೋಲೆ ಸಂಖ್ಯೆ: ಸಿ5[4] ಇತರೆ 06/2017-18, ದಿನಾಂಕ: 05-05-2018

***

ವಿಷಯದನ್ವಯ ಅನುಕಂಪದ ನೇಮಕಾತಿ ಅರ್ಜಿಗಳನ್ನು ಸಂಪೂರ್ಣವಾಗಿ ಆನ್‌ಲೈನ್ ತಂತ್ರಾಂಶದ ಮುಖಾಂತರ ಇಇಡಿಎಸ್ ನಲ್ಲಿ ನಿರ್ವಹಿಸಲು ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಲಾಗಿದೆ ಮತ್ತು ಇಲಾಖಾ ವೆಬ್‌ಸೈಟ್ https://schooleducation.karnataka.gov.in ಅಳವಡಿಸಲಾಗಿದೆ. ಅನುಕಂಪದ ನೇಮಕಾತಿ ಅರ್ಜಿಗಳು ಪ್ರಸ್ತುತದಲ್ಲಿ ಭೌತಿಕವಾಗಿ ಸ್ವೀಕೃತಿಯಾಗಿ ನಿರ್ವಹಣೆ ಕ್ರಮಗಳು ಆಗುತ್ತಿದ್ದು ಇದರಿಂದ ಹಲವು ಪ್ರಕರಣಗಳಲ್ಲಿ ಅರ್ಜಿದಾರರಿಗೆ ಅನಗತ್ಯ ತೊಂದರೆಗಳಾಗುತ್ತಿರುವುದು ಗಮನಕ್ಕೆ ಬಂದಿದೆ. ಅಸಾಧಾರಣ ವಿಳಂಬವನ್ನೂ ಸಹ ಗಮನಿಸಿದ್ದು ದೂರುಗಳಿಗೆ ದಾರಿಯಾಗಿದೆ. ಇನ್ನು ಮುಂದೆ ಅರ್ಜಿದಾರರಿಗೆ ಅನುಕೂಲವಾಗುವಂತೆ ಮತ್ತು ಇಡೀ ಪ್ರಕ್ರಿಯೆಯನ್ನು ಅತ್ಯಂತ ಪಾರದರ್ಶಕವಾಗಿ ನಿರ್ವಹಿಸಬಹುದಾದ ರೀತಿಯಲ್ಲಿ ಈಗಾಗಲೇ ಆನ್‌ಲೈನ್ ತಂತ್ರಾಂಶವನ್ನು ಅಭಿವೃದ್ಧಿಪಡಿಸಲಾಗಿದ್ದು ಪ್ರಸ್ತುತ ವಿವಿಧ ಜಿಲ್ಲೆಗಳಿಂದ ಆನ್‌ಲೈನ್ ಪರೀಕ್ಷೆಗೆ ಮಾಡ್ಯೂಲ್‌ನ್ನು ಒದಗಿಸಿ ವರದಿಗಳನ್ನು ಪಡೆಯಲಾಗುತ್ತಿದೆ. ವರದಿಗಳ ಆಧಾರದಲ್ಲಿ ತಂತ್ರಾಂಶವು ಅತ್ಯಂತ ಸಮರ್ಥವಾಗಿ ಮತ್ತು ಸುಲಭ ವ್ಯವಹರಣೆಗೆ ಸೂಕ್ತವಾಗಿ ಇರುತ್ತದೆ.

ಇನ್ನು ಮುಂದೆ ಎಲ್ಲಾ ಅನುಕಂಪದ ನೇಮಕಾತಿ ಅರ್ಜಿಗಳನ್ನು ಆನ್‌ಲೈನ್ ವ್ಯವಸ್ಥೆಯಲ್ಲಿಯೇ ಸ್ವೀಕರಿಸಲು ಮತ್ತು ಆಯಾ ಕಛೇರಿ ಹಂತಗಳಲ್ಲಿ ಮತ್ತು ಮೇಲು ಕಛೇರಿಗೆ ಅರ್ಜಿಗಳನ್ನು ಮುಂದಿನ ಕ್ರಮಕ್ಕಾಗಿ ಆನ್‌ಲೈನ್‌ನಲ್ಲಿಯೇ ಸಲ್ಲಿಸಲು ವ್ಯವಸ್ಥೆಗೊಳಿಸಲಾಗಿದೆ. ಅನುಕಂಪದ ಆಧಾರಿತ ಅರ್ಜಿಗಳ ಪ್ರಕ್ರಿಯೆಯು ಯಾವುದೇ ವಿಳಂಬವಿಲ್ಲದಂತೆ ಕಾರ್ಯನಿರ್ವಾಹಕರ ಹಂತದಿಂದ ನೇಮಕಾತಿ ಆದೇಶ ನೀಡುವವರೆಗೆ ಆನ್‌ಲೈನ್ ವ್ಯವಸ್ಥೆಯಲ್ಲಿ ನಿರ್ವಹಣೆಗೊಳ್ಳಲು ಕೆಳಕಂಡ ಸೂಚನೆಗಳನ್ನು ಹೊರಡಿಸಲಾಗಿದೆ. ಸೂಚನೆಗಳನ್ನು ಪಾಲಿಸದೇ ಭೌತಿಕವಾಗಿ ಅರ್ಜಿಗಳನ್ನು ನಿರ್ವಹಿಸುವುದನ್ನು ಅತ್ಯಂತ ಗಂಭಿರವಾಗಿ ಪರಿಗಣಿಸಲಾಗುವುದು ಮತ್ತು ಅಂತಹ ಅಧಿಕಾರಿ ಮತ್ತು ಸಿಬ್ಬಂದಿಗಳ ವಿರುದ್ಧ ನಿಯಮಾನುಸಾರ ಶಿಸ್ತು ಕ್ರಮಗಳನ್ನು ಜಾರಿಗೊಳಿಸಲಾಗುವುದು ಎಂದು ಎಚ್ಚರಿಸಿದೆ.

**ಸೂಚನೆಗಳು ಮತ್ತು ವೇಳಾಪಟ್ಟಿ:**

1. **ದಿನಾಂಕ:19.11.2024** ರಿಂದ ಎಲ್ಲಾ ಅನುಕಂಪದ ಆಧಾರಿತ ನೇಮಕಾತಿ ಕೋರಿಕೆ ಅರ್ಜಿಗಳನ್ನು ಕಡ್ಡಾಯವಾಗಿ ಆನ್‌ಲೈನ್ ವ್ಯವಸ್ಥೆಯಲ್ಲಿಯೇ ಸ್ವೀಕರಿಸತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು. ಆದರೆ ದಿನಾಂಕ:18.10.2024 ರಿಂದ 16.11.2024 ರವರೆಗೆ ಸಮಾನಾಂತರವಾಗಿ ಭೌತಿಕವಾಗಿಯೂ ಅರ್ಜಿಗಳನ್ನು ಪಡೆದು ಆನ್‌ಲೈನ್ ವ್ಯವಸ್ಥೆ ಮತ್ತು ಭೌತಿಕ ವ್ಯವಸ್ಥೆಯಲ್ಲಿ ಪ್ರಕ್ರಿಯೆಯನ್ನು ಹಮ್ಮಿಕೊಳ್ಳತಕ್ಕದ್ದು. ಈ ವ್ಯವಸ್ಥೆಯು ಅನುಕಂಪದ ಆಧಾರಿತ ಅರ್ಜಿದಾರರಿಗೆ ಯಾವುದೇ ತೊಂದರೆಯಾಗದಂತೆ ಆಡಳಿತ ವ್ಯವಸ್ಥೆಯಲ್ಲಿ ಭೌತಿಕ ಪದ್ಧತಿಯಿಂದ ಆನ್‌ಲೈನ್ ಪದ್ಧತಿಗೆ ಪೂರ್ಣ ಹೊಂದಿಕೊಳ್ಳಲು ಸಮಯವನ್ನು ಕಲ್ಪಿಸಲಾಗಿದೆ (transition period). ಇದರಿಂದ ತಂತ್ರಾಂಶವನ್ನು ಬಳಸುವ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ಹೊಸ ವ್ಯವಸ್ಥೆಗೆ ಒಗ್ಗೂಡಿಕೊಳ್ಳಲು ಮತ್ತು ಅರ್ಜಿದಾರರಿಗೂ ಸಹ ಸೂಕ್ತ ತಾಂತ್ರಿಕ ಮಾರ್ಗದರ್ಶನವನ್ನು ನೀಡಲು ತರಬೇತಿಯನ್ನು ಪಡೆದುಕೊಳ್ಳಲು ಕಾಲಾವಕಾಶವನ್ನು ಕಲ್ಪಿಸಲಾಗಿದೆ. ಆದರೆ ದಿನಾಂಕ:19-11-2024 ರಿಂದ ಮುಂದಕ್ಕೆ ಅರ್ಜಿ ಸ್ವೀಕಾರ ಮತ್ತು ಎಲ್ಲಾ ಪ್ರಾರಂಭಿಕ ಪ್ರಕ್ರಿಯೆಗಳಿಂದ ಆಖೈರಿನವರೆಗೆ ಸಂಪೂರ್ಣವಾಗಿ ಆನ್‌ಲೈನ್‌ನಲ್ಲಿಯೇ ಕಡತ ನಿರ್ವಹಣೆಯಾಗತಕ್ಕದ್ದು. ಈಗಾಗಲೇ ಇಇಡಿಎಸ್ ತಂತ್ರಾಂಶವನ್ನು ಬಳಸಲಾಗುತ್ತಿರುವುದರಿಂದ ಅನುಕಂಪದ ಆಧಾರಿತ ನೇಮಕಾತಿ ಅರ್ಜಿಗಳ ಆನ್‌ಲೈನ್ ನಿರ್ವಹಣೆಗೆ ಒಗ್ಗಿಕೊಳ್ಳುವುದು ಸುಲಭವಾಗಿಯೇ ಇದೆ.
2. ಅನುಕಂಪದ ಆಧಾರಿತ ನೇಮಕಾತಿಗೆ ಚಾಲ್ತಿಯಲ್ಲಿರುವ ನಿಯಮಗಳನುಸಾರ ಎಲ್ಲಾ ಅಂಶಗಳನ್ನು ಪರಿಗಣಿಸಿ ವ್ಯವಸ್ಥೆಗಳನ್ನು ತಂತ್ರಾಂಶದಲ್ಲಿ ಅಳವಡಿಸಲಾಗಿದೆ ಮತ್ತು ಭೌತಿಕ ಕಡತ ನಿರ್ವಹಣೆಯ ಪ್ರತಿರೂಪದಂತೆಯೇ ಆನ್‌ಲೈನ್ ವ್ಯವಸ್ಥೆಯ ಕಡತ ನಿರ್ವಹಣೆ ಸಹ ಇರಲಿದೆ.
3. ಪ್ರಸ್ತುತದಲ್ಲಿ ಅನುಕಂಪದ ಆಧಾರಿತ ನೇಮಕಾತಿ ಕೋರಿಕೆ ಅರ್ಜಿಯು ಒಂದನೇ ಹಂತದಲ್ಲಿ ಆಯಾ ಕಛೇರಿ ಮುಖ್ಯಸ್ಥರಲ್ಲಿ ಭೌತಿಕವಾಗಿ ಸ್ವೀಕೃತವಾಗುತ್ತಿದೆ. ಆದರೆ ಇನ್ನು ಮುಂದೆ ಅರ್ಜಿದಾರರಿಗೆ ಅನುಕೂಲವಾಗುವಂತೆ

ನೇರವಾಗಿ https://schooleducation.karnataka.gov.in ಮುಖಾಂತರ ಒದಗಿಸಲಾಗಿರುವ ಲಿಂಕ್‌ನಲ್ಲಿ ಅರ್ಜಿಯನ್ನು ಸಲ್ಲಿಸಲು ವ್ಯವಸ್ಥೆ ಮಾಡಲಾಗಿದೆ. ಆಯಾ ಕಛೇರಿ ಮುಖ್ಯಸ್ಥರು ಅವರ ಲಾಗಿನ್ ಮುಖಾಂತರದಲ್ಲಿ ಡ್ಯಾಶ್‌ಬೋರ್ಡ್‌ನ್ನು ಪರಿಶೀಲಿಸಿಕಂಡು ಅರ್ಜಿ ಸ್ವೀಕೃತವಾಗಿರುವ ಬಗ್ಗೆ ಭೌತಿಕ ವಹಿಯಲ್ಲಿಯೂ ಸಹ ನೋಂದಾಯಿಸಿಕೊಳ್ಳಬಹುದಾಗಿದೆ. ಪ್ರಕ್ರಿಯೆಯು ಅತ್ಯಂತ ಸರಳವಾಗಿರುವಂತೆ ವ್ಯವಸ್ಥೆಗೊಳಿಸಲಾಗಿದೆ ಲಿಂಕ್ ಮೇಲೆ ಕ್ಲಿಕ್ ಮಾಡಿದ ತಕ್ಷಣದಲ್ಲಿ ಅರ್ಜಿದಾರನಿಗೆ ಅರ್ಜಿ ಸಲ್ಲಿಸಲು ಲಾಗಿನ್ ಪೇಜ್ ತೆರೆದುಕೊಳ್ಳಲಿದೆ. ಅದರಲ್ಲಿ ಕನ್ನಡ ಮತ್ತು ಆಂಗ್ಲ ಭಾಷಾ ಅವತರಣಿಕೆಯನ್ನು ಆಯ್ಕೆ ಮಾಡಬಹುದಾಗಿದೆ. ಮೃತ ಸರ್ಕಾರಿ ನೌಕರರ ಅವಲಂಬಿತರಿಂದ ಅರ್ಜಿ ಸಲ್ಲಿಕೆಯಾಗುವುದರಿಂದ ಮೃತ ಸರ್ಕಾರಿ ನೌಕರರ ಕೆ.ಜಿ.ಐ.ಡಿ ಸಂಖ್ಯೆಯನ್ನೇ ಲಾಗಿನ್ ಐಡಿ ಮತ್ತು ಪಾಸ್‌ವರ್ಡ್‌ನ್ನಾಗಿ ಪ್ರಥಮದಲ್ಲಿ ಇರಿಸಿಕೊಂಡಿದೆ.

4. ಪ್ರಥಮವಾಗಿ ಕೆಜಿಐಡಿ ಸಂಖ್ಯೆ ಬಳಸಿ ಲಾಗಿನ್ ಐಡಿ ಮುಖಾಂತರ ಲಾಗಿನ್ ಆಗುವ ಅರ್ಜಿದಾರರಿಗೆ ಮೃತ ನೌಕರರ ಮೂಲ ವಿವರಗಳನ್ನು ಲಾಗಿನ್ ಪೇಜ್‌ನಲ್ಲಿ ಡಿಸ್ಪ್ಲೇ ನೀಡಲಾಗಿದೆ. ಅಲ್ಲೇ ಮುಂದುವರೆದು ಅರ್ಜಿದಾರರು ತಮ್ಮ ಮೂಲ ವಿವರಗಳನ್ನು ನಮೂದಿಸಿ ಅರ್ಜಿಯನ್ನು ಆನ್‌ಲೈನ್‌ನಲ್ಲಿ ದಾಖಲಿಸುವುದು ಮತ್ತು ಒದಗಿಸಲಾಗಿರುವ ಸ್ಲಾಟ್‌ನಲ್ಲಿ ಅವರ ಲಿಖಿತ ಅರ್ಜಿಯನ್ನು ಸಹ ಅಪ್‌ಲೋಡ್ ಮಾಡಲು ವ್ಯವಸ್ಥೆ ಇರುತ್ತದೆ. ಈ ಬಗ್ಗೆ ಮತ್ತು ಕಛೇರಿಗಳಲ್ಲಿ ಕಡತ ನಿರ್ವಹಣೆ ಬಗ್ಗೆ ಎಲ್ಲಾ ಭಾಗಿದಾರರ ತಿಳುವಳಿಕೆಗೆ ಇದರೊಂದಿಗೆ "USER MANUAL" ಪ್ರತಿಯನ್ನು ಲಗತ್ತಿಸಿದೆ. ಸದರಿ ಮಾನ್ಯುಯಲ್ ನಲ್ಲಿ screen shot ಚಿತ್ರಣಗಳ ಸಹಿತ Flow chart ಮಾದರಿಯಲ್ಲಿ ಸುಲಭವಾಗಿ ತಿಳಿದುಕೊಳ್ಳಬಹುದಾದ ಮಾದರಿಯಲ್ಲಿ ವಿವರಿಸಲಾಗಿದೆ. ಈ ಬಗ್ಗೆ ಆಯಾ ಕಛೇರಿಯ ಮುಖ್ಯಸ್ಥರು ಸಹ ತಮ್ಮ ಅಧೀನದ/ ಅಧೀನ ಕಛೇರಿಯ ಸಿಬ್ಬಂದಿಗಳನ್ನೊಳಗೊಂಡಂತೆ ಎಲ್ಲರಿಗೂ ಕಡ್ಡಾಯವಾಗಿ ಸಂಪೂರ್ಣ ತಿಳುವಳಿಕೆಯನ್ನು ನೀಡಿ ಅನುಕಂಪದ ಆಧಾರಿತ ಅರ್ಜಿದಾರರಿಗೆ ಯಾವುದೇ ತೊಂದರೆಯಾಗದಂತೆ ಪ್ರಕ್ರಿಯೆಯನ್ನು ಅಳವಡಿಸಿಕೊಳ್ಳುವ ಜವಾಬ್ದಾರಿಯನ್ನು ನಿರ್ವಹಿಸಲಿದ್ದಾರೆ.
5. ಅನುಕಂಪದ ಆಧಾರಿತ ನೇಮಕಾತಿಯು ಮಾನವೀಯ ನೆಲೆಯಲ್ಲಿ ಇಲಾಖೆಯ ಮೃತ ಸರ್ಕಾರಿ ನೌಕರರ ಕುಟುಂಬದವರಿಗೆ ಸರ್ಕಾರವು ಕಲ್ಪಿಸಿರುವ ಒಂದು ಅವಕಾಶ. ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿದ್ದು ನಿವೃತ್ತಿ ವಯೋಮಾನಕ್ಕಿಂತ ಮೊದಲು ಅಕಸ್ಮಾತ್ ಮರಣ ಹೊಂದಿದಲ್ಲಿ ಆ ಎಲ್ಲಾ ಮೃತ ಸರ್ಕಾರಿ ನೌಕರರ ಕುಟುಂಬಕ್ಕೆ ಸರ್ಕಾರವು ಕಲ್ಪಿಸಿರುವ ಅವಕಾಶಗಳಂತೆ ಇಲಾಖೆಯ ಅಧಿಕಾರಿ/ಸಿಬ್ಬಂದಿಗಳು ಕ್ರಮವಹಿಸಿ ಸೂಕ್ತ ನೇಮಕಾತಿಗಳನ್ನು ಕಲ್ಪಿಸುವುದು ಅತ್ಯಂತ ಸಂವೇದನಾತ್ಮಕ ಜವಾಬ್ದಾರಿ ಎಂಬುದನ್ನು ತಿಳಿದುಕೊಳ್ಳತಕ್ಕದ್ದು. ಆಕಸ್ಮಿಕವಾದ ಸಂದರ್ಭಗಳು ಯಾವುದೇ ರೀತಿಯಲ್ಲಿಯೂ, ಯಾವುದೇ ಸಂದರ್ಭದಲ್ಲಿಯೂ ಯಾರಿಗಾದರೂ ಬರಬಹುದಾಗಿದೆ ಎಂಬುದನ್ನು ನಾವೆಲ್ಲರೂ ಅರಿಯತಕ್ಕದ್ದು. ಇದರಲ್ಲಿ ಯಾವುದೇ ಅಪಚಾರವಾಗದಂತೆ ಮತ್ತು ಲೋಪವಾಗದಂತೆ ಸದರಿ ಕುಟುಂಬದ ಅವಲಂಬಿತ ಅರ್ಜಿದಾರರಿಗೆ ಸಹಕರಿಸುವುದು, ಮಾರ್ಗದರ್ಶನ ನೀಡುವುದು, ಕಡತವನ್ನು ಸೂಕ್ತವಾಗಿ ನಿರ್ವಹಿಸಿ ಅನುಕಂಪದ ಆಧಾರಿತ ನೇಮಕಾತಿ ಅರ್ಜಿಯನ್ನು ವಿಲೇವಾರಿ ಮಾಡತಕ್ಕದ್ದು.
6. ಅನುಕಂಪದ ಆಧಾರಿತ ಅರ್ಜಿ ಕುರಿತಂತೆ ಚಾಲ್ತಿಯಲ್ಲಿರುವ ಎಲ್ಲಾ ನಿಯಮಗಳು ಮತ್ತು ಇಲಾಖೆಯಿಂದ ಹೊರಡಿಸಲಾದ ಎಲ್ಲಾ ಸುತ್ತೋಲೆ/ಜ್ಞಾಪನ/ಪತ್ರ ವ್ಯವಹರಣೆಯ ಎಲ್ಲಾ ಸೂಚನೆಗಳು ಆನ್‌ಲೈನ್‌ನಲ್ಲಿ ಕಡತ ನಿರ್ವಹಣೆ ವ್ಯವಸ್ಥೆಗೂ ಅನ್ವಯವಾಗಲಿದೆ ಎಂಬುದನ್ನು ಸೂಚಿಸಿದೆ.
7. ಸಂಪೂರ್ಣವಾಗಿ ಆನ್‌ಲೈನ್‌ಗೊಳಿಸಲು ಕೆಳಗಿನಂತೆ ವೇಳಾಪಟ್ಟಿಯನ್ನು ನಿಗದಿಗೊಳಿಸಿದೆ.

| ಕ್ರ. ಸಂ | ವಿಷಯ | ಕ್ರಮವಹಿಸುವ ಅಧಿಕಾರಿ/ಇತರೆ | ವಿವರ | ಷರಾ/ವೇಳಾಪಟ್ಟಿ |
|---|---|---|---|---|
| 01 | ಯಾವುದಾದರೂ ಸರ್ಕಾರಿ ಅಧಿಕಾರಿ/ನೌಕರರು ನಿವೃತ್ತಿ ವಯೋಮಾನಕ್ಕಿಂತ ಮೊದಲು ಅಕಸ್ಮಾತ್ ಮೃತರಾದ ಸಂದರ್ಭದಲ್ಲಿ | ಆಯಾ ಶಾಲಾ ಮುಖ್ಯಸ್ಥರು/ ಡಿಡಿಓ | ಆಯಾ ಕಛೇರಿ ಮುಖ್ಯಸ್ಥರು ಅಂದರೆ ಪ್ರೌಢಶಾಲೆಗೆ ಸೇರಿದ ಅಧಿಕಾರಿ/ ಸಿಬ್ಬಂದಿಗಳ ಸಂದರ್ಭದಲ್ಲಿ ಆಯಾ ಪ್ರೌಢಶಾಲಾ ಮುಖ್ಯಸ್ಥರಿಂದ/ ಆಯಾ ಬಿಇಒ/ಡಿಡಿ/ಇತರೆ ಕಛೇರಿ ಮುಖ್ಯಸ್ಥರಿಂದ ಸದರಿ ಮೃತರ ಕುಟುಂಬಕ್ಕೆ ಪತ್ರ ವ್ಯವಹರಣೆ/ಕಛೇರಿ ವತಿಯಿಂದ ಜವಾಬ್ದಾರಿಯುತ ಅಧಿಕಾರಿ/ಸಿಬ್ಬಂದಿ ಭೇಟಿ ನೀಡಿ ಸದರಿ ಮೃತ ನೌಕರರ ಕುಟುಂಬಕ್ಕೆ ದೊರೆಯಬಹುದಾದ ಅನುಕಂಪದ ಆಧಾರಿತ ನೇಮಕಾತಿ ಸೌಲಭ್ಯದ ಬಗ್ಗೆ ಮತ್ತು ಅರ್ಜಿಯನ್ನು ಸಲ್ಲಿಸುವ ಬಗ್ಗೆ ಕಾರ್ಯವಿಧಾನ ಮತ್ತು ಅವಶ್ಯಕ ದಾಖಲೆಗಳ ಬಗ್ಗೆ ತಿಳುವಳಿಕೆ ನೀಡುವುದು. ಮತ್ತು ಇಲಾಖೆಯ ಜಾಲತಾಣ https://schooleducation.karnataka.gov.in ಮುಖಾಂತರದಲ್ಲಿ ಅರ್ಜಿ ಸಲ್ಲಿಸಲು ಇರುವ | ಸದರಿಯವರ ಮರಣ ದಿನಾಂಕದಿಂದ 15 ದಿನಗಳ ಒಳಗಾಗಿ. ಹಾಗೆಯೇ ಇಇಡಿಎಸ್ ನಲ್ಲಿ ಮರಣ ಹೊಂದಿರುವ ಅಧಿಕಾರಿ/ನೌಕರರ ವಿವರಗಳನ್ನು ಕಡ್ಡಾಯವಾಗಿ ಇಂದೀಕರಿಸತಕ್ಕದ್ದು. ಇಂದೀಕರಣಗೊಂಡಲ್ಲಿ ಮಾತ್ರ ಅನುಕಂಪದ ಆದಾರಿತ ನೇಮಕಾತಿಗೆ ಆನ್‌ಲೈನ್ ಮಾಡ್ಯೂಲ್ ತೆರೆದುಕೊಳ್ಳುವುದರಿಂದ ಈ ಪ್ರಕ್ರಿಯೆ ಅತ್ಯಂತ ಪ್ರಮುಖ ಮತ್ತು ಅವಶ್ಯಕ ಎಂಬುದನ್ನು |

| | | | | |
|---|---|---|---|---|
| | | | ವ್ಯವಸ್ಥೆಯ ಬಗ್ಗೆ ಕಡ್ಡಾಯವಾಗಿ user Manual ಮತ್ತು ಮೃತರ ಕೆಜಿಐಡಿ ಸಂಖ್ಯೆ ವಿವರಗಳನ್ನು ಮೃತರ ಕುಟುಂಬಕ್ಕೆ ಮಾಹಿತಿ ಒದಗಿಸಿ ಅರ್ಜಿ ಸಲ್ಲಿಸಬಹುದಾದ ವಿಧಾನದ ಬಗ್ಗೆ ಮಾರ್ಗದರ್ಶನ ನೀಡುವುದು. ಕಛೇರಿಯ ಜವಾಬ್ದಾರಿಯುತರ ದೂರವಾಣಿ ಸಂಖ್ಯೆಯನ್ನು ಸಮನ್ವಯಕ್ಕಾಗಿ ಮೃತರ ಕುಟುಂಬಕ್ಕೆ ನೀಡುವುದು. ಆನ್‌ಲೈನ್‌ನಲ್ಲಿ ಮೃತರ ಕುಟುಂಬದಿಂದ ಅರ್ಜಿದಾರರ ಸಂಪರ್ಕಕ್ಕೆ ಇರುವ ಮೊಬೈಲ್ ಸಂಖ್ಯೆಯನ್ನು ತಂತ್ರಾಂಶದಲ್ಲಿ ಮೇಲಿನ ಲಾಗಿನ್ ಪೇಜ್‌ನಲ್ಲಿ ನೊಂದಾಯಿಸಿಕೊಳ್ಳುವ ಸೂಚನೆ ನೀಡುವುದು ಮತ್ತು ಅರ್ಜಿ ಸಲ್ಲಿಸಿದ ತುರ್ತು ತರುವಾಯದಲ್ಲಿ "ಸ್ವೀಕೃತಿ ಸಂದೇಶವು" ಮೊಬೈಲ್‌ನಲ್ಲಿ ಅರ್ಜಿದಾರರು ಖಾತ್ರಿಗಾಗಿ ಪಡೆಯಲಿದ್ದಾರೆ ಎಂಬುದರ ಬಗ್ಗೆ ಸಹ ತಿಳುವಳಿಕೆ ನೀಡುವುದು. ಈ ಕುರಿತು ನೋಟೀಸ್ ಬೋರ್ಡ್‌ನಲ್ಲಿ ಪ್ರಚುರ ಪಡಿಸುವುದು. | ಸೂಚಿಸಿದೆ. |
| 02 | ಮೃತ ನೌಕರರ ಕುಟುಂಬದ ವತಿಯಿಂದ ಅವಲಂಬಿತರು ಪ್ರಥಮವಾಗಿ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವ ಬಗ್ಗೆ. | 1.ಆಯಾ ಶಾಲಾ ಮುಖ್ಯಸ್ಥರು/ ಡಿಡಿಒ<br>2.ಅರ್ಜಿದಾರರು | ಮೃತ ನೌಕರರ ಕುಟುಂಬದ ಅವಲಂಬಿತ ಅರ್ಜಿದಾರರಿಗೆ ಅರ್ಜಿ ಸಲ್ಲಿಸಲು ಅಗತ್ಯವಿರುವ ಮೃತ ನೌಕರರ KGID ಸಂಖ್ಯೆ ಮತ್ತು ಇತರೆ ದಾಖಲೆಗಳನ್ನು ಒದಗಿಸುವುದರೊಂದಿಗೆ ಅರ್ಜಿ ಸಲ್ಲಿಸುವ ವಿಧಾನದ ಬಗ್ಗೆ ಅಗತ್ಯ ತಿಳುವಳಿಕೆಯನ್ನು ಮೇಲಿನಂತೆ ನೀಡಲಾಗಿರುತ್ತದೆ. ಆದರೂ ಅರ್ಜಿದಾರರಿಗೆ ತಾಂತ್ರಿಕವಾಗಿ ಅರ್ಜಿ ಸಲ್ಲಿಸಲು ಕಛೇರಿ ವತಿಯಿಂದ ಸಹಕಾರದ ಅಗತ್ಯವಿರಬಹುದಾಗಿದ್ದು, ಕಛೇರಿ ಮುಖ್ಯಸ್ಥರು ತಮ್ಮ ಲಾಗಿನ್‌ನ ಡ್ಯಾಶ್‌ಬೋರ್ಡ್‌ನ್ನು ಪರಿಶೀಲಿಸಿಕೊಂಡು ಸಂಬಂಧಿತರ ಯಾವುದೇ ಅರ್ಜಿ ಸ್ವೀಕೃತವಾಗದೇ ಇದ್ದ ಪಕ್ಷದಲ್ಲಿ ಸದರಿ ಕುಟುಂಬದ ಸದಸ್ಯರನ್ನು ಸಂಪರ್ಕಿಸಿ ಅಗತ್ಯ ಸಹಕಾರವನ್ನು ಒದಗಿಸಿ ಪ್ರಥಮ ಅರ್ಜಿಯನ್ನು ದಾಖಲಿಸಲು "hand holding"ಜವಾಬ್ದಾರಿಯನ್ನು ನಿರ್ವಹಿಸುವುದು. ಅವಶ್ಯವಿರುವ ನಮೂನೆ—1/ಮೂಲ ಅರ್ಜಿ ಸಲ್ಲಿಸಲು ಎಲ್ಲಾ ದಾಖಲೆಗಳ ಚೆಕ್‌ಲಿಸ್ಟ್‌ನ್ನು ಅರ್ಜಿದಾರರಿಗೆ ಮತ್ತೊಮ್ಮೆ ಒದಗಿಸುವುದು. ಅದೇ ಸಂದರ್ಭದಲ್ಲಿ ಪ್ರಾಥಮಿಕ ಅರ್ಜಿ ಸ್ವೀಕೃತವಾಗಿ ಕಛೇರಿ ಮುಖ್ಯಸ್ಥರು/ಡಿಡಿಒ ರವರು ತಮ್ಮ ಲಾಗಿನ್‌ನಲ್ಲಿ ಸದರಿ ಅರ್ಜಿಯನ್ನು ಸ್ವೀಕರಿಸಿದ ತಕ್ಷಣ ಅರ್ಜಿದಾರರಿಗೆ ಮುಂದಿನ ಪ್ರಕ್ರಿಯೆ ನಿರ್ವಹಿಸಲು ಲಾಗಿನ್ ಐಡಿ ಮತ್ತು ಪಾಸ್‌ವರ್ಡ್ ಮಾಹಿತಿಯು ಮೊಬೈಲ್ ಮುಖಾಂತರ ರವಾನೆಯಾಗಲಿದೆ. ಸದರಿ ಲಾಗಿನ್ ಐಡಿ ಮತ್ತು ಪಾಸ್‌ವರ್ಡ್ | ನೌಕರರ ಮರಣ ದಿನಾಂಕದಿಂದ 30 ದಿನಗಳ ಒಳಗಾಗಿ. |

| | | | | |
|---|---|---|---|---|
| | | | ವಿವರಗಳನ್ನು ದುರುಪಯೋಗವಾಗದಂತೆ ಗೌಪ್ಯವಾಗಿ ಇರಿಸಿಕೊಂಡು ನಮೂನೆ-1/ಮುಖ್ಯ ಅರ್ಜಿಯನ್ನು ಸಲ್ಲಿಸಲು ಅರ್ಜಿದಾರರು ಬಳಸಬಹುದಾಗಿದೆ. ಎಲ್ಲಾ ಸಂದರ್ಭಗಳಲ್ಲಿಯೂ ಆಯಾ ಕಛೇರಿ ಮುಖ್ಯಸ್ಥರನ್ನು ಅರ್ಜಿದಾರರು ಸಂಪರ್ಕಿಸಿ ಹೆಚ್ಚಿನ ವಿವರಗಳನ್ನು ಪಡೆದುಕೊಳ್ಳಬಹುದಾಗಿರುತ್ತದೆ. | |
| 03 | ನಮೂನೆ-1/ಮುಖ್ಯ ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ | 1. ಆಯಾ ಶಾಲಾ ಮುಖ್ಯಸ್ಥರು/ ಡಿಡಿಓ<br>2. ಅರ್ಜಿದಾರರು | ಅರ್ಜಿದಾರರಿಗೆ ಮುಖ್ಯ ಅರ್ಜಿ ಸಲ್ಲಿಸಲು ಲಾಗಿನ್ ಐಡಿ ಮತ್ತು ಪಾಸ್‌ವರ್ಡ್ ಗಳ ವಿವರಗಳು ನೊಂದಾಯಿತ ಮೊಬೈಲ್ ಸಂಖ್ಯೆಯಲ್ಲಿ ದೊರೆತಿರುತ್ತದೆ ಅದನ್ನು ಬಳಸಿಕೊಂಡು ಅರ್ಜಿದಾರರು ಅರ್ಜಿಯನ್ನು ಮತ್ತು ದಾಖಲೆಗಳನ್ನು ನಿಗದಿತವಾಗಿ ಸಲ್ಲಿಸಬಹುದಾಗಿದೆ. ಆಯಾ ಕಛೇರಿ ಮುಖ್ಯಸ್ಥರು ಅವರ ಲಾಗಿನ್ ಡಾಶ್‌ಬೋರ್ಡ್‌ನಲ್ಲಿ ಅಂತಹ ನಮೂನೆ-1 ಸ್ವೀಕೃತವಾಗಿರುವ ಬಗ್ಗೆ ಪರಿಶೀಲಿಸಿಕೊಳ್ಳತಕ್ಕದ್ದು. | ಗರಿಷ್ಟ 4 ತಿಂಗಳುಗಳು. ಈ ಅವಧಿಯಲ್ಲಿ ಮುಖ್ಯ ಅರ್ಜಿ ಸ್ವೀಕೃತವಾಗದೇ ಇದ್ದಲ್ಲಿ ಮೃತರ ಕುಟುಂಬವನ್ನು ಸಂಪರ್ಕಿಸುವುದು. ಅರ್ಜಿ ಸಲ್ಲಿಸಲು ಗರಿಷ್ಠ ಅವಧಿ 01 ವರ್ಷದ ಆಖೈರಿನವರೆಗೆ ಅವಕಾಶವಿರುವುದರಿಂದ ಅರ್ಜಿದಾರನಿಗೆ ಅವಧಿ ಮುಗಿಯುವವರೆಗೆ ನಿಯತಕಾಲಿಕವಾಗಿ 02 ತಿಂಗಳಿಗೊಮ್ಮೆ ಕಛೇರಿ ಮುಖ್ಯಸ್ಥರಿಂದ ನೆನಪೋಲೆಯನ್ನು ಹೊರಡಿಸುವ ಕ್ರಮ ಆಗತಕ್ಕದ್ದು. |
| 04 | ಅರ್ಜಿಯ ನಿರ್ವಹಣೆ | ಆಯಾ ಶಾಲಾ ಮುಖ್ಯಸ್ಥರು/ ಡಿಡಿಓ/ಕಛೇರಿ ಮುಖ್ಯಸ್ಥರು | User Manual ನಂತೆ ಮತ್ತು ಪ್ರತಿ ಹಂತದಲ್ಲಿಯೂ ನಿಗದಿತ ಅವಧಿಯೊಳಗೆ ಅರ್ಜಿ ನಿರ್ವಹಣೆ ಮತ್ತು ಮೇಲು ಕಛೇರಿಗೆ ಮುಂದಿನ ಕ್ರಮಕ್ಕಾಗಿ ಸಲ್ಲಿಸುವ ಪ್ರಕ್ರಿಯೆ. | ಕನಿಷ್ಟ ಕಾಲಾವಧಿಯೊಳಗೆ ಅರ್ಜಿಗಳನ್ನು ನಿರ್ವಹಿಸತಕ್ಕದ್ದು. |

ಅನುಕಂಪದ ಆಧಾರಿತ ನೇಮಕಾತಿ ಪ್ರಕ್ರಿಯೆಯ ಆನ್‌ಲೈನ್ ನಿರ್ವಹಣೆ ಅನುಷ್ಠಾನವನ್ನು ರಾಜ್ಯವ್ಯಾಪಿಯಾಗಿ ಎಲ್ಲಾ ಶೈಕ್ಷಣಿಕ ಜಿಲ್ಲೆಗಳಲ್ಲಿ ದಿನಾಂಕ:19-11-2024 ರಿಂದ ಜಾರಿಯಾಗಲಿದ್ದು, ಪೂರ್ವಭಾವಿಯಾಗಿ ದಿನಾಂಕ:18.10.2024 ರಿಂದ ಶೈಕ್ಷಣಿಕ ವಿಭಾಗಕ್ಕೆ 01 ರಂತೆ ಆಯ್ದ ಜಿಲ್ಲೆಗಳಾದ ಬೆಂಗಳೂರು ದಕ್ಷಿಣ ಜಿಲ್ಲೆ, ಮೈಸೂರು, ಧಾರವಾಡ ಮತ್ತು ಗುಲ್ಬರ್ಗಾ ಜಿಲ್ಲೆಗಳಲ್ಲಿ ಒಟ್ಟು 04 ಜಿಲ್ಲೆಗಳಲ್ಲಿ ಲೈವ್ ಟೆಸ್ಟಿಂಗ್/ರಿಯಲ್ ಮೋಡ್ ಟೆಸ್ಟಿಂಗ್ ಗಾಗಿ ಆನ್‌ಲೈನ್ ಮತ್ತು ಭೌತಿಕ ಎರಡೂ ವಿಧಾನಗಳ ಸಮಾನಾಂತರ ಪ್ರಕ್ರಿಯೆಗಳು ಜರುಗಲಿದ್ದು, ಇತರ ಜಿಲ್ಲೆಗಳು ಸಹ ಈ ದ್ವಿಮಾದರಿ (dual mode) ವ್ಯವಸ್ಥೆಯಲ್ಲಿ ಪ್ರಕ್ರಿಯೆ ನಿರ್ವಹಣೆಗೆ ತೊಡಗಬಹುದಾಗಿದೆ. ಆದರೆ ದಿನಾಂಕ:19-11-2024 ರಿಂದ ಪೂರ್ಣವಾಗಿ ಎಲ್ಲಾ ಜಿಲ್ಲೆಗಳಲ್ಲಿ ಆನ್‌ಲೈನ್ ಮಾದರಿಯಲ್ಲಿ ಮಾತ್ರ ಅರ್ಜಿ ಸ್ವೀಕಾರ ಮತ್ತು ಕಡತ ನಿರ್ವಹಣೆ ಕ್ರಮವಹಿಸಲು ಅಧಿಸೂಚಿಸಿದೆ. ಯಾವುದೇ ಪರ್ಯಾಯವಿರುವುದಿಲ್ಲ ಮತ್ತು ಕಡ್ಡಾಯವಾಗಿ ಸೂಚನೆಗಳನ್ನು ಪಾಲಿಸಿ ಅತ್ಯಂತ ಪಾರದರ್ಶಕವಾಗಿರುವಂತೆ ಆನ್‌ಲೈನ್ ವ್ಯವಸ್ಥೆಯನ್ನು ಅಳವಡಿಸಿಕೊಳ್ಳಲು ಎಲ್ಲಾ ಕಛೇರಿಗಳಿಗೆ ಸೂಚಿಸಿದೆ.

ಡಾ.ಕೆ.ವಿ ತ್ರಿಲೋಕ್ ಚಂದ್ರ ಭಾ.ಆ.ಸೇ.,
ಆಯುಕ್ತರು

ಗೆ,

1. ಅಪರ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಕಲಬುರಗಿ/ಧಾರವಾಡ ವಿಭಾಗ ರವರಿಗೆ ಅಗತ್ಯ ಕ್ರಮಕ್ಕಾಗಿ.
2. ರಾಜ್ಯದ ಎಲ್ಲಾ ನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ ರವರಿಗೆ ಅಗತ್ಯ ಕ್ರಮಕ್ಕಾಗಿ.
3. ರಾಜ್ಯದ ಎಲ್ಲಾ ಸಹ ನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ ರವರಿಗೆ ಅಗತ್ಯ ಕ್ರಮಕ್ಕಾಗಿ.

4. ರಾಜ್ಯದ ಎಲ್ಲಾ ಜಿಲ್ಲಾ ಉಪ ನಿರ್ದೇಶಕರು[ ಆಡಳಿತ] ಮತ್ತು [ಅಭಿವೃದ್ಧಿ], ಶಾಲಾ ಶಿಕ್ಷಣ ಇಲಾಖೆ ರವರಿಗೆ ಅಗತ್ಯ ಕ್ರಮಕ್ಕಾಗಿ
5. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಶಾಲಾ ಶಿಕ್ಷಣ ಇಲಾಖೆ ರವರಿಗೆ ಸಂಬಂಧಿಸಿದ ಉಪನಿರ್ದೇಶಕರು (ಆಡಳಿತ) ರವರಿಂದ ಅಗತ್ಯ ಕ್ರಮಕ್ಕಾಗಿ.
6. ರಾಜ್ಯದ ಎಲ್ಲಾ ಪ್ರೌಢ ಶಾಲಾ ಶಿಕ್ಷಕರು/ಕಛೇರಿ ಮುಖ್ಯಸ್ಥರು ರವರಿಗೆ ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಶಾಲಾ ಶಿಕ್ಷಣ ಇಲಾಖೆ ರವರಿಂದ ಅಗತ್ಯ ಕ್ರಮಕ್ಕಾಗಿ.
7. ಹಿರಿಯ ಸಹಾಯಕ ನಿರ್ದೇಶಕರು, (ಇ-ಆಡಳಿತ) ಮತ್ತು ಹಿರಿಯ ಸಹಾಯಕ ನಿರ್ದೇಶಕರು (ಆನ್‌ಲೈನ್ ಮತ್ತು ಸಕಾಲ ಸೇವೆಗಳು) ರವರು ICT Infracon ಸಂಸ್ಥೆಯವರೊಂದಿಗೆ ಅಗತ್ಯ ಸಮನ್ವಯ ಕೈಗೊಂಡು ತಂತ್ರಾಂಶವು ನಿಗದಿತ ವೇಳಾಪಟ್ಟಿಯಂತೆ ನಿರ್ವಹಣೆಯಾಗಲು ಯಾವುದೇ ತೊಂದರೆಯಾಗದಂತೆ ಕ್ರಮವಹಿಸಲು ಸೂಚಿಸಿದೆ. ಹಾಗೂ ಅಧಿಸೂಚನೆಯನ್ನು ಇಲಾಖೆಯ https://schooleducation.karnataka.gov.in ರಲ್ಲಿ ಎಲ್ಲಾ ಸಂಬಂಧಿತರ ಗಮನಕ್ಕೆ ಹಾಗೂ ಸಾರ್ವಜನಿಕರಿಗೆ ಮಾಹಿತಿಗಾಗಿ ಪ್ರಕಟಿಸಲು ತಿಳಿಸಿದೆ. ಮತ್ತು ದಿನಾಂಕ:18-10-2024 ರಂದು ಆನ್‌ಲೈನ್ ಮುಖಾಂತರದಲ್ಲಿ ಎಲ್ಲಾ ಉಪನಿರ್ದೇಶಕರು ಮತ್ತು ಇತರೆ ಅಧಿಕಾರಿ/ನೌಕರರಿಗೆ ತರಬೇತಿಯನ್ನು ಹಮ್ಮಿಕೊಳ್ಳಲು ಸೂಚಿಸಿದೆ.
8. ಕಛೇರಿ ಪ್ರತಿ.